ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 29-06-2018

ಪ್ರಕಟಣೆಯ ಕೃಪೆಗಾಗಿ

# ಶಿಕ್ಷಣ ಕ್ಷೇತ್ರದ ಸುಧಾರಣೆಯಲ್ಲಿ ತಂತ್ರಜ್ಞಾನದ ಪಾತ್ರ ಹಿರಿದು

## ಜೆಎಸ್‌ಎಸ್ ಮಹಿಳಾ ಕಾಲೇಜಿನ ಕಾರ್ಯಕ್ರಮದಲ್ಲಿ ಶ್ರೀ ಪಿ ಬಾಲಸುಬ್ರಮಣ್ಯ

ಕೊಳ್ಳೇಗಾಲ : 29-06-2018 : ಎಲ್ಲ ಕ್ಷೇತ್ರಗಳಲ್ಲಿಯೂ ಛಾಪು ಮಾಡಿಸಿರುವ ತಂತ್ರಜ್ಞಾನವು ಶಿಕ್ಷಣ ಕ್ಷೇತ್ರದಲ್ಲಿನ ಸುಧಾರಣೆ ಹಾಗೂ ಬದಲಾವಣೆಯಲ್ಲಿಯೂ ಮಹತ್ತರ ಪಾತ್ರ ವಹಿಸುತ್ತಿದೆ ಎಂದು ಶ್ರೀ ಪಿ ಬಾಲಸುಬ್ರಮಣ್ಯ, ಗ್ರಂಥಪಾಲಕರು, ಸರ್ಕಾರಿ ಮಹಿಳಾ ಕಾಲೇಜು, ಚಾಮರಾಜನಗರರವರು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ವತಿಯಿಂದ ಆಯೋಜಿಸಿದ್ದ "ಶಿಕ್ಷಣ ಕ್ಷೇತ್ರದಲ್ಲಿ ಇ-ಸಂಪನ್ಮೂಲಗಳ ಬಳಕೆ" ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಮತ್ತು ಇ-ಸಂಪನ್ಮೂಲ ಕೇಂದ್ರದ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಮಾತನಾಡಿದರು.

ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ತಂತ್ರಜ್ಞಾನ ಪ್ರವೇಶಿಸದ ಕ್ಷೇತ್ರವಿಲ್ಲ. ಮುಖ್ಯವಾಗಿ ಶಿಕ್ಷಣ ಕ್ಷೇತ್ರದಲ್ಲಿ ಹೊಸಕ್ರಾಂತಿಯನ್ನೇ ಮಾಡುತ್ತಿದೆ. ಸಂಸ್ಥೆಗಳ ಜಾಲತಾಣ, ಡಿಜಿಟಲ್ ಲೈಬ್ರರಿ, ಸ್ಮಾರ್ಟ್ ಕ್ಲಾಸ್ ರೂಂ, ಟೆಲಿಶಿಕ್ಷಣ, ಇ-ಕಂಟೆಂಟ್ ಇತ್ಯಾದಿ ತಂತ್ರಜ್ಞಾನಗಳಿಂದ ವಿದ್ಯಾರ್ಥಿಗಳ ಕಲಿಕಾ ವಿಧಾನ ಹಾಗೂ ಕಲಿಕೆಯಲ್ಲಿ ಗಣನೀಯ ಸುಧಾರಣೆ ತಂದಿದೆ. ವಿದ್ಯಾರ್ಥಿಗಳ ಏಕಾಗ್ರತೆ, ಗ್ರಹಿಕೆ ಸಾಮರ್ಥ್ಯಗಳನ್ನು ಹೆಚ್ಚಿಸುವುದೂ ಸುಲಭ ಸಾಧ್ಯ. ದೇಶದ ಮೂಲೆ ಮೂಲೆಗಳ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೂ ನಗರದಲ್ಲಿ ದೊರೆಯುವ ಗುಣಮಟ್ಟದ ಶಿಕ್ಷಣ ದೊರೆಯುವಂತಾಗಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ಜಾಲದ ವೃದ್ಧಿ ಬಹಳ ಮಹತ್ವ ಪಡೆದಿದೆ. ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ವಿದ್ಯಾರ್ಥಿಗಳಿಗೆ ಹೊಸ ಹೊಸ ವಿಷಯಗಳ ಕಲಿಕೆಯಲ್ಲಿ ಅಧ್ಯಾಪಕರು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಬೇಕು. ಶಾಲಾ ಕಾಲೇಜುಗಳಲ್ಲಿಯೂ ತಂತ್ರಜ್ಞಾನಕ್ಕೆ ಪೂರಕ ಎನಿಸುವಂತಹ ಮೂಲ ಸೌಲಭ್ಯಗಳು ದೊರೆಯುವಂತಾಗಬೇಕು. ಗುಣಾತ್ಮಕ ಶಿಕ್ಷಣವನ್ನು ವೃದ್ಧಿಸಲು ಮಾಹಿತಿ ಸಂವಹನ ತಂತ್ರಜ್ಞಾನ ತಾಂತ್ರಿಕತೆಗಳನ್ನು ಸಮನ್ವಯಗೊಳಿಸಿ ಬಳಸುವುದು. ಇ-ಕಂಟೆಂಟ್ ಸಿದ್ಧಪಡಿಸಿ ತೀವ್ರ ವೇಗದ ಜಾಲದೊಂದಿಗೆ ಜೋಡಿಸುವುದು, ಇತ್ಯಾದಿ ಶಿಕ್ಷಣ ಸಂಬಂಧ ಸೇವೆಗಳು ವಿದ್ಯಾರ್ಥಿಗಳಿಗೆ ದೊರೆಯುವಂತಾಗಬೇಕು ಎಂದು ತಿಳಿಸಿದರು.

ಗ್ರಂಥಪಾಲಕರಾದ ಶ್ರೀ ಶ್ರೀನಿವಾಸ್ ಹಾಗೂ ಶ್ರೀ ಹೆಚ್ ಜಿ ನಟರಾಜನ್, ಇತಿಹಾಸ ಸಹಾಯಕ ಪ್ರಾಧ್ಯಾಪಕರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕು. ಅಂಜನ ಸ್ವಾಗತಿಸಿ ವಂದಿಸಿದರು.

ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ವತಿಯಿಂದ ಆಯೋಜಿಸಿದ್ದ "ಶಿಕ್ಷಣ ಕ್ಷೇತ್ರದಲ್ಲಿ ಇ-ಸಂಪನ್ಮೂಲಗಳ ಬಳಕೆ" ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಮತ್ತು ಇ-ಸಂಪನ್ಮೂಲ ಕೇಂದ್ರದ ಉದ್ಘಾಟನೆಯನ್ನು ಶ್ರೀ ಪಿ ಬಾಲಸುಬ್ರಮಣ್ಯ, ಗ್ರಂಥಪಾಲಕರು, ಸರ್ಕಾರಿ ಮಹಿಳಾ ಕಾಲೇಜು, ಚಾಮರಾಜನಗರ ರವರು ಉದ್ಘಾಟಿಸುತ್ತಿರುವುದು ಚಿತ್ರದಲ್ಲಿ ಶ್ರೀ ಶ್ರೀನಿವಾಸ್, ಶ್ರೀ ಪ್ರಭುಸ್ವಾಮಿ ಪ್ರಾಚಾರ್ಯ ಪ್ರೊ. ಉಮೇಶರವರನ್ನು ಕಾಣಬಹುದು.



ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ವತಿಯಿಂದ ಆಯೋಜಿಸಿದ್ದ "ಶಿಕ್ಷಣ ಕ್ಷೇತ್ರದಲ್ಲಿ ಇ-ಸಂಪನ್ಮೂಲಗಳ ಬಳಕೆ" ಎಂಬ ವಿಷಯದ ಮೇಲೆ ಶ್ರೀ ಪಿ ಬಾಲಸುಬ್ರಮಣ್ಯ, ಗ್ರಂಥಪಾಲಕರು, ಸರ್ಕಾರಿ ಮಹಿಳಾ ಕಾಲೇಜು, ಚಾಮರಾಜನಗರ ರವರು ವಿಶೇಷ ಉಪನ್ಯಾಸವನ್ನು ಮಾಡುತ್ತಿರುದು. ಚಿತ್ರದಲ್ಲಿ ಇತಿಹಾಸ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಹೆಚ್ ಜಿ ನಟರಾಜನ್, ಪ್ರಾಚಾರ್ಯ ಪ್ರೊ. ಉಮೇಶ್ ಹಾಗೂ ಶ್ರೀ ಶ್ರೀನಿವಾಸ್ ರವರನ್ನು ಕಾಣಬಹುದು.




ಕಾರ್ಯಕ್ರಮದಲ್ಲಿ ಭಾಗವಹಿಸಿರು ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು

